# *Form No.4.*

# *Deposition Sheet( R.P.52)*

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**MVC 181/2024**

**PW 2**

| | | |
|---|---|---|
| ಸಾಕ್ಷಿಯ ಹೆಸರು | ಃ | ಪ್ರವೀಣ್ ಶೆಟ್ಟಿ |
| ತಂದೆ ಹೆಸರು | ಃ | ರಘುರಾಮ ಶೆಟ್ಟಿ |
| ಪ್ರಾಯ | ಃ | 40 ವರ್ಷ |
| ಉದ್ಯೋಗ | ಃ | ವ್ಯಾಪಾರ |
| ವಾಸ | ಃ | ಪಾದೆಬೆಟ್ಟು , ಪಡುಬಿದ್ರೆ |

ದಿನಾಂಕ **: 05.07.2025** ರಂದು ಪಿಡಬ್ಲ್ಯೂ - 2 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಎನ್.ವಿ.ಪಿ. ಅರ್ಜಿದಾರರು ಪರ ವಕೀಲರಿಂದಃ

ನಾನು ಈ ಕೇಸಿನ ಸಾಕ್ಷಿದಾರ. ನ್ಯಾಯಾಲಯದಿಂದ ಸಮನ್ಸ ಜಾರಿಯಾದ ಮೇರೆಗೆ ಹಾಜರಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ನನ್ನ ಮುಖ್ಯ ವಿಚಾರಣೆಯ ಬದಲಿಗೆ ನಾನು ಈ ದಿನ ನ್ಯಾಯಾಲಯಕ್ಕೆ ಪ್ರಮಾಣಪತ್ರವನ್ನು ಸಲ್ಲಿಸುತ್ತಿದ್ದು , ಸದರಿ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಅಂಶಗಳು ಸತ್ಯವಾಗಿವೆ.

ನನ್ನ ಆಧಾರ್ ಕಾರ್ಡ್ ನ ನೋಟರೀಕೃತ ಪ್ರತಿಯನ್ನು ನಿಪಿ - 16 ಎಂದು ಗುರುತಿಸಲಾಯಿತು. (ಮೂಲಪ್ರತಿಯನ್ನು ಪರಿಶೀಲಿಸಿ ಹಿಂತಿರುಗಿಸಲಾಯಿತು), ದೂರು ನಿಪಿ - 2 ನ್ನು ತೋರಿಸಿದ್ದು, ಸದರಿ ದೂರನ್ನು ನಾನೇ ನೀಡಿದ್ದೇನೆ. ಅದರಲ್ಲಿರುವ ಸಹಿ ನನ್ನದಾಗಿರುತ್ತದೆ. ಮಹಜರು ಮಾಡಿರುವ ಸಮಯದಲ್ಲಿ ನಾನು ಹಾಜರಿದ್ದು, ನಿಪಿ - 3 ರಲ್ಲಿ ನನ್ನ ಸಹಿ ಇರುತ್ತದೆ. ಮಹಜರು ಸಮಯದಲ್ಲಿ ಫೋಟೋ ತೆಗೆದಿದ್ದು, ಸದರಿ ಫೋಟೋಗಳನ್ನು ಗುರುತಿಸಲು 2 ನೇ ಎದುರುದಾರರ ಪರ ವಕೀಲರು ತಕರಾರು ಮಾಡಿರುತ್ತಾರೆ. ಆದರೆ ಆ ಫೋಟೋಗಳಲ್ಲಿ ನಾನು ಕಾಣುತ್ತಿದ್ದೇನೆ. ಸದರಿ ತಕರಾರಿಗೆ ಒಳಪಟ್ಟು ನಿಪಿ - 17 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ</u> ಶ್ರೀಮತಿ ಆರ್.ಹೆಚ್. 2 ನೇ ಎದುರುದಾರರು ಪರ ವಕೀಲರಿಂದಃ

ಮೃತ ಅಶ್ವಿತ್ ಶೆಟ್ಟಿ ಮತ್ತು ಅರ್ಜಿದಾರರು ನನ್ನ ಸಂಬಂಧಿಕರು. ನಾನು ಪಡುಬಿದ್ರೆಯಲ್ಲಿ ಕೋಳಿ ಅಂಗಡಿ ನಡೆಸುತ್ತಿದ್ದೇನೆ ಎಂದು ತೋರಿಸಲು ದಾಖಲೆಗಳು ಇರುತ್ತದೆ. ದಾಖಲೆಯನ್ನು ಹಾಜರುಪಡಿಸಬಹುದು. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಅರ್ಜಿದಾರರ ಪರ ವಕೀಲರ ಕಚೇರಿಯಲ್ಲಿ ತಯಾರಿಸಲಾಗಿದೆ. ಅಂತಿಮ ವರದಿಯಲ್ಲಿ ಚಾಸಾ 1 ನಾನೇ ಆಗಿರುತ್ತೇನೆ. ಸದರಿ ಅಂತಿಮ ವರದಿಯ ಪ್ರತಿಯನ್ನು ತೋರಿಸಿದ್ದು,

ಒಪ್ಪಿಕೊಂಡ ಕಾರಣ ನಿಆರ್ - 1 ಎಂದು ಗುರುತಿಸಲಾಯಿತು. ನಾನು ಪಡುಬಿದ್ರೆಯ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿದ್ದೇನೆ. ಸದರಿ ನ್ಯಾಯಾಲಯದಲ್ಲಿ ಅಂತಿಮ ವರದಿಯನ್ನು ಒಪ್ಪಿಕೊಂಡು ಅದಕ್ಕೆ ಸರಿಯಾಗಿ ಸಾಕ್ಷಿ ನುಡಿದಿದ್ದೇನೆ. ನಿಪಿ - 3 ಮಹಜರಿನಲ್ಲಿ ತಿಳಿಸಿದಂತಹ ವಿಚಾರಗಳು ಸರಿ ಇರುತ್ತದೆ. ಮಹಜರಿನ ಜೊತೆ ಒಂದು ನಕ್ಷೆಯನ್ನು ತಯಾರಿಸಿದ್ದು, ಅದನ್ನು ನಾನು ಒಪ್ಪಿಕೊಂಡ ಕಾರಣ ನಿಆರ್ - 2 ಎಂದು ಗುರುತಿಸಲಾಯಿತು.

ಅಪಘಾತವಾದ ದಿನ ನಾನು ಪಳಿಮಾರುವಿನಿಂದ (ಕಾರ್ಕಳದಿಂದ) ಪಡುಬಿದ್ರೆ ಕಡೆಗೆ ಬರುತ್ತಿದ್ದೆ. ಮೃತ ಅಶ್ವಿತ್ ಶೆಟ್ಟಿಯವರೂ ಸಹಾ ಕಾರ್ಕಳದಿಂದ ಪಡುಬಿದ್ರೆ ಕಡೆಗೆ ಬರುತ್ತಿದ್ದರು. ಅಪಘಾತವಾಗಿರುವುದು ಕಾರ್ಕಳ - ಪಡುಬಿದ್ರೆ ರಸ್ತೆಯ ವಿರುದ್ಧ ದಿಕ್ಕಿನಲ್ಲಿ ಅಂದರೆ ಪಡುಬಿದ್ರೆಯಿಂದ ಕಾರ್ಕಳದ ಕಡೆಗೆ ಬರುವಂತಹ ರಸ್ತೆಯ ಎಡಭಾಗದಲ್ಲಿ ಎಂದರೆ ಸರಿ. ಮಹಜರಿನಲ್ಲಿ ಪಡುಬಿದ್ರೆಯಿಂದ ಕಾರ್ಕಳದ ಕಡೆಗೆ ಹೋಗುವ ರಸ್ತೆಯಲ್ಲಿ ಉತ್ತರ ದಿಕ್ಕಿನಿಂದ 8 ಅಡಿ ದೂರದಲ್ಲಿ ಅಪಘಾತವಾಗಿದೆ ಎಂದು ತೋರಿಸಿದ್ದಾರೆ ಎಂದರೆ ಸರಿ. ಮಹಜರಿನಲ್ಲಿ ಮತ್ತು ನಕಾಶೆಯಲ್ಲಿ ತೋರಿಸಿರುವ ಹಾಗೆಯೇ ವಾಹನಗಳು ನಿಂತ ಸ್ಥಳದಲ್ಲಿ ಫೋಟೋಗಳನ್ನು ತೆಗೆದಿದ್ದಾರೆ ಎಂದರೆ ಸರಿ. ನಕಾಶೆಯ ಪ್ರಕಾರ ಅಶ್ವಿತ್ ಶೆಟ್ಟಿಯವರು ತಾವು ಹೋಗುತ್ತಿದ್ದ ರಸ್ತೆಯ ವಿರುದ್ಧ ದಿಕ್ಕಿಗೆ ಹೋಗಿ, ಅವರ ನಿರ್ಲಕ್ಷ್ಯತನದಿಂದ ಅಪಘಾತವಾಗಿದೆ ಎಂದು ತೋರಿಸಲಾಗಿದೆ ಎಂದರೆ ಸರಿ. ಆದರೆ ಬಸ್ಸಿನವರು ಪಡುಬಿದ್ರೆಯಿಂದ ಕಾರ್ಕಳಕ್ಕೆ ಬರುವ ರಸ್ತೆಯಲ್ಲಿ

ವಾಹನವನ್ನು ಬಲಬದಿಗೆ ತೆಗೆದುಕೊಂಡ ಕಾರಣ, ಅಪಘಾತವಾಗಿರುತ್ತದೆ. ಅಪಘಾತವಾದ ನಂತರ ಬಸ್ಸು ಬಲಬದಿಯಲ್ಲಿ ನಿಂತಿರುತ್ತದೆ. ನಕಾಶೆಯ ಪ್ರಕಾರ ಅಪಘಾತ ಆಗಿರುತ್ತದೆ. ಅಶ್ವಿತ್ ಶೆಟ್ಟಿಯವರ ಸಂಪೂರ್ಣ ನಿರ್ಲಕ್ಷ್ಯತನದಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಅವರು ವಿರುದ್ಧ ದಿಕ್ಕಿನಲ್ಲಿ ಹೋಗಿ ಅಪಘಾತಪಡಿಸಿದ್ದಾರೆ ಎಂದರೆ ಸರಿಯಲ್ಲ. ಅಶ್ವಿತ್ ಶೆಟ್ಟಿ ಹಾಗೂ ಅರ್ಜಿದಾರರು ನನಗೆ ಸಂಬಂಧಿಕರಾದ ಕಾರಣ ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಎಂಎಸಿಟಿ.,
ಕಾರ್ಕಳ.